# ಹೊಸತು

## ಕಾಯ ಕಾಂಪ್ಲೆಕ್ಷನ್ ಕ್ರೀಂ

ಮಹಿಳೆಯರಿಗೆ ಬಿಡುವಿಲ್ಲದ ಕೆಲಸದ ನಡುವೆ ಮೇಕಪ್ ಮಾಡಿಕೊಳ್ಳಲು ಮತ್ತು ತ್ವಚೆಯ ಕಾಳಜಿ ವಹಿಸಲು ನಮಗೆ ಸಿಗುವುದು ಕೊಂಚ ಸಮಯ ಮಾತ್ರ. ಇದನ್ನು ಗಮನದಲ್ಲಿಟ್ಟುಕೊಂಡು ಸೌಂದರ್ಯವರ್ಧಕ ಕಂಪೆನಿ ಕಾಯ ಇದೀಗ 'ಕಾಯ ಕಾಂಪ್ಲೆಕ್ಷನ್ ಪರ್ಫೆಕ್ಟರ್ ಕ್ರೀಂ' ಎಂಬ ಹೊಸ ಬಗೆಯ ಕ್ರೀಮ್ ಒಂದನ್ನು ಬಿಡುಗಡೆ ಮಾಡಿದೆ. ಇದು ತ್ವಚೆಗೆ ಸಂಪೂರ್ಣ ಆವರಿಸಿಕೊಳ್ಳುವ ಮೂಲಕ ಕಾಳಜಿ ಒದಗಿಸುವುದಲ್ಲದೆ, ಚರ್ಮಕಾಂತಿಯನ್ನು ಹೆಚ್ಚಿಸಿ ಮೇಕಪ್ ಕೆಲಸವನ್ನು ಅಚ್ಚುಕಟ್ಟಾಗಿ ಮುಗಿಸುವಂಥ ಕೆಲಸ ಮಾಡುತ್ತದೆ ಎಂಬುದು ಕಂಪೆನಿ ವಿವರಣೆ. ಬೆಲೆ 30 ಎಂಎಲ್‌ಗೆ 990 ರೂಪಾಯಿ. ಇದರ ಜತೆಗೆ ಕಾಯ ಹೈಡ್ರಾ ಕ್ಲೆನ್ಸ್ ಮೇಕಪ್ ರಿಮೂವರ್ ಅನ್ನೂ ಬಿಡುಗಡೆ ಮಾಡಿದೆ. ಬೆಲೆ 100 ಎಂಎಲ್‌ಗೆ 290 ರೂಪಾಯಿ.







## ಏರ್‌ವಿಕ್ ಸುಗಂಧ

ಸುಗಂಧ ದ್ರವ್ಯ ಏರ್‌ವಿಕ್ ಲೈಫ್ ಸೆಂಟ್ಸ್ ಹೊಸದಾಗಿ ಮಾರುಕಟ್ಟೆಗೆ ಬಂದಿದೆ. ಇದರಲ್ಲಿ ಫ್ರೆಶ್‌ಮ್ಯಾಟಿಕ್ ಮತ್ತು ಏರೊ ಸೋಲ್ ಎಂಬ ಎರಡು ಮಾದರಿಯ ರೂಮ್ ಫ್ರೆಶ್ನರ್ ಇದ್ದು ಮನೆಯನ್ನು ಸದಾ ಸುವಾಸನೆಯಿಂದ ಇರಿಸುತ್ತದೆ. ಬದಲಾಗುತ್ತಿರುವ ಫ್ರಾಗ್ರೆನ್ಸ್ ತಂತ್ರಜ್ಞಾನ ಆಧರಿಸಿರುವ ಈ ಮೂರು ವಿಭಿನ್ನ ಸೆಂಟ್‌ಗಳು ಇಡೀ ದಿನ ಮೂರು ವಿಧದ ಸುವಾಸನೆಯನ್ನು ಪ್ರತ್ಯೇಕವಾಗಿ ನೀಡುತ್ತವೆ ಎಂಬುದು ಕಂಪೆನಿ ಮಾತು.

ಬೆಲೆ 210 ಎಂಎಲ್‌ಗೆ 249 ರೂ. ಮಾಹಿತಿಗೆ: 99802 14950



## ಏಸರ್ ಟ್ಯಾಬ್ಲೆಟ್, ಲ್ಯಾಪ್‌ಟಾಪ್

ಕಂಪ್ಯೂಟರ್, ಟ್ಯಾಬ್ಲೆಟ್ ಮತ್ತು ಲ್ಯಾಪ್‌ಟಾಪ್‌ಗಳಿಗೆ ಹೆಸರಾದ ಏಸರ್ ಕಂಪೆನಿ ಇದೀಗ ಅತ್ಯಾಧುನಿಕ ಸೌಲಭ್ಯಗಳ ಟ್ಯಾಬ್ಲೆಟ್ ಮತ್ತು ಲ್ಯಾಪ್‌ಟಾಪ್‌ಗಳನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಡೈಮಂಡ್ ಕಟ್ ಎಡ್ಜ್ ಇರುವ ನೋಟ್‌ಬುಕ್ ಸಹ ಇದ್ದು, ಐದು ಗಂಟೆಗಳ ಕಾಲ ನಿರಂತರವಾಗಿ ಕೆಲಸ ಮಾಡಲು ಅನುಕೂಲಕರವಾದ ಬ್ಯಾಟರಿ ಸೌಲಭ್ಯವಿದೆ. ನೋಟ್‌ಬುಕ್ ಕೇವಲ 1.9ಕಿಲೋ ತೂಕ ಹಾಗೂ 18.5 ಎಂಎಂ ನಷ್ಟು ತೆಳುವಾಗಿದೆ.

ಬೆಲೆ, ಲಭ್ಯತೆ ಮತ್ತಿತರ ವಿವರಗಳಿಗೆ www.acer.com.

## ಎಲ್ಲೆ18 ಗ್ಲಿಟರ್ ನೈಲ್ ಪಾಪ್ಸ್

ಉಗುರುಗಳನ್ನು ಆಕರ್ಷಕವಾಗಿಸಲು ಎಲ್ಲೆ18 ಇದೀಗ ಗ್ಲಿಟರ್ ನೈಲ್ ಪಾಪ್ಸ್‌ಗಳನ್ನು ಮಾರುಕಟ್ಟೆಗೆ ತಂದಿದೆ. ಇದರಲ್ಲಿ ಕಡುಹಸಿರು, ಕಪ್ಪು ಮತ್ತು ಮೆರೂನ್ ಸೇರಿದಂತೆ 10 ವಿವಿಧ ಶೇಡ್‌ಗಳ ಪಾಲಿಶ್‌ಗಳಿದ್ದು ಉಗುರುಗಳನ್ನು ಹೊಳೆಯುವಂತೆ ಮಾಡುವುದಲ್ಲದೆ ದೀರ್ಘಕಾಲ ಬಾಳಿಕೆ ಬರುತ್ತದೆ ಎಂಬುದು ಕಂಪೆನಿ ವಿವರಣೆ. ಬೆಲೆ 50 ರೂಪಾಯಿ. ಮಾಹಿತಿಗೆ: 9619165680






## ಕರಾಟ್‌ಲೇನ್ ಆಭರಣ

ಹಬ್ಬವನ್ನು ಗಮನದಲ್ಲಿ ಇಟ್ಟುಕೊಂಡು ಕರಾಟ್‌ಲೇನ್ ಕಂಪೆನಿ ಇದೀಗ ನೂತನ ವಿನ್ಯಾಸದ ಇಯರ್‌ರಿಂಗ್‌ಗಳನ್ನು ಬಿಡುಗಡೆ ಮಾಡಿದೆ. ಇದಕ್ಕೆ 'ಜ್ಯುವೆಲ್ಲರಿ ಆಫ್ ಸ್ಟಾರ್' ಎಂಬ ಹೆಸರನ್ನು ಇಟ್ಟಿದೆ. 18 ಮತ್ತು 22 ಕ್ಯಾರಟ್ ಚಿನ್ನ ಬಳಸಿ ಇದನ್ನು ತಯಾರಿಸಲಾಗಿದೆ. ಬೆಲೆ 5 ಸಾವಿರ ರೂಪಾಯಿಗಳಿಂದ ಆರಂಭ. ವಿವರಕ್ಕೆ: 9820224440

